# ‘ಆ್ಯಕ್ಟರ್’ ನಂತರ ನಟನೆಯನ್ನೇ ಬಿಟ್ಟಿದ್ದೆ

**ನವೀನ್ ಕೃಷ್ಣ**
ಝೀ ಕನ್ನಡದ ‘ಭೂಮಿಗೆ ಬಂದ ಭಗವಂತ’ದ ಶಿವಪ್ರಸಾದ್



◆ **ಕಲಾ ಜಗತ್ತಿಗೆ ನೀವೂ ಬರಲು ಕಾರಣ ಏನು?**

ಚಿಕ್ಕವಯಸ್ಸಿನಿಂದಲೂ ತಂದೆ (ಶ್ರೀನಿವಾಸ ಮೂರ್ತಿ) ಅವರ ನಟನೆಯನ್ನು ನೋಡಿಕೊಂಡು ಬೆಳೆದಿದ್ದೇನೆ. ಅವರ ಪ್ರೇರಣೆಯಿಂದ ನಾನೂ ಅಭಿನಯವನ್ನೇ ಮಾಡಬೇಕು ಎಂದುಕೊಂಡು ಆಗಲೇ ನಿರ್ಧರಿಸಿದ್ದೆ. ಏಕೆಂದರೆ ಆಗ ನನಗೆ ಆಸಕ್ತಿ ಇದ್ದಿದ್ದು ನಟನೆಯಲ್ಲಿ ಮಾತ್ರ. ಈ ಕ್ಷೇತ್ರದಲ್ಲಿ ತೊಡಗಿಕೊಂಡ ಮೇಲೆ ಅದು ಬೇರೆ ಆಯಾಮದಲ್ಲಿ ನನ್ನನ್ನು ತೊಡಗಿಸಿಕೊಳ್ಳಲು ಸಾಧ್ಯವಾಯಿತು. ಹಾಗಾಗಿ ನಿರ್ದೇಶನ, ಕಥೆ, ಸಾಹಿತ್ಯ, ಸಂಗೀತದಲ್ಲೂ ಕೆಲಸ ಮಾಡಿದೆ. ಈಗ ಮತ್ತೊಮ್ಮೆ ನಟನೆಯನ್ನು ಮಾಡುತ್ತಿದ್ದೇನೆ.

◆ **ನಿರ್ದೇಶಕರಾದ ನಿಮಗೆ ಮತ್ತೊಬ್ಬರ ನಿರ್ದೇಶನದಲ್ಲಿ ಇರುಸು ಮುರುಸು ಅನ್ನಿಸುತ್ತಾ?**

ಕ್ಯಾಮೆರಾ ಮುಂದೆ ಬಣ್ಣ ಹಚ್ಚಿಕೊಂಡು ಬಂದರೆ ನಾನು ಒಬ್ಬ ನಟ ಮಾತ್ರ. ನಿರ್ದೇಶಕರ ಸೂಚನೆಯಂತೆ ನಟಿಸುವುದು ನನ್ನ ಕೆಲಸ. ಸುಧಾರಣೆಗೆ ಸಂಬಂಧಿಸಿದಂತೆ ಸಣ್ಣಪುಟ್ಟ ಬದಲಾವಣೆಯನ್ನು ಮಾಡಿಕೊಳ್ಳಲು ನಿರ್ದೇಶಕರ ಅನುಮತಿ ಕೋರುತ್ತೇನೆ. ಅದನ್ನು ಬಿಟ್ಟರೆ ಬೇರೆ ರೀತಿಯಲ್ಲಿ ಮಧ್ಯ ಪ್ರವೇಶ ಮಾಡುವುದಿಲ್ಲ. ಅವರು ಹೇಳಿದ್ದನ್ನು ಚಾಚೂತಪ್ಪದೆ ಪಾಲಿಸುವುದು ನನ್ನ ಕರ್ತವ್ಯ. ಡೈಲಾಗ್ ಬರಹ ನನಗೂ ಗೊತ್ತಿರುವುದರಿಂದ ಕೆಲವೊಮ್ಮೆ ಬದಲಾವಣೆ ಮಾಡಿಕೊಳ್ಳಬಹುದಾ ಎಂದು ಕೇಳುತ್ತೇನೆ. ಅವರು ಒಪ್ಪಿದರೆ ಮಾತ್ರ ಮಾಡಿಕೊಳ್ಳುತ್ತೇನೆ, ಇಲ್ಲದಿದ್ದರೆ ಇಲ್ಲ. ಇದಕ್ಕೆ ಇರುಸು ಮುರುಸಿನ ಪ್ರಶ್ನೆ ಇಲ್ಲ. ಪ್ರತಿಯೊಬ್ಬರೂ ಅವರವರ ಕೆಲಸವನ್ನು ಅರಿತು ಮಾಡಬೇಕಾಗುತ್ತದೆ.

◆ **ಬಣ್ಣ ಹಚ್ಚಿದ ಮೊದಲ ದಿನಗಳು ಹೇಗಿದ್ದವು? ಬಣ್ಣದ ನಂಟಿನ ಬಗ್ಗೆ ಹೇಳಿ.**

ಚಿಕ್ಕವಯಸ್ಸಿನಲ್ಲಿ ಬಣ್ಣ ಹಚ್ಚಿದ ದಿನಗಳ ನೆನಪು ಮನಸಿನಲ್ಲಿ ನೆಲೆಗೊಂಡಿಲ್ಲ. ‘ಶ್ರೀರಸ್ತು ಶುಭಮಸ್ತು’ ನನ್ನ ಮೊದಲ ಸಿನಿಮಾ. ‘ಚಂದ ಮಾಮ ಚಕ್ಕುಲಿ ಮಾಮ’ ಮೊದಲ ಧಾರಾವಾಹಿ. ಆಗ ಸಾಮಾಜಿಕ ಮಾಧ್ಯಮಗಳು ಇರಲಿಲ್ಲ. ಪತ್ರಿಕೆಯೊಂದರಲ್ಲಿ ಧಾರಾವಾಹಿಯ ವಿಮರ್ಶೆ ಮಾಡಿದ್ದರು. ಅದರಲ್ಲಿ ನಾನು ವೈಯಕ್ತಿಕ ಪರಿಚಯ ಇಲ್ಲದಿದ್ದರೂ ‘ಅತ್ಯುತ್ತಮ ನಟ ಪ್ರಮೋದ್ ಪಾತ್ರಧಾರಿ’ ಎಂದು ಬರೆದಿದ್ದರು. ಅದು ನನಗೆ ಮೊದಲ ಸಿಕ್ಕ ಮನ್ನಣೆ. ಅದು ಯಾವತ್ತೂ ನೆನಪಿನಲ್ಲಿ ಇರುವುದು. ಅಪ್ಪ ಚಿತ್ರೀಕರಣಕ್ಕೆ ನಮ್ಮನ್ನು ಕರೆದುಕೊಂಡು ಹೋಗುತ್ತಿರಲಿಲ್ಲ. ಅವರು ತುಂಬ ಕಷ್ಟಪಟ್ಟು ಬಣ್ಣದ ಲೋಕದಲ್ಲಿ ಉಳಿದಿದ್ದರು. ಅವರಿಗೆ ನಾವು ಉನ್ನತ ವ್ಯಾಸಂಗ ಮಾಡಿ ಬೇರೆ ಕ್ಷೇತ್ರಕ್ಕೆ ಹೋಗಬೇಕಿತ್ತು. ಆದರೆ ಬಣ್ಣದ ಪ್ರೀತಿ ನನ್ನನ್ನು ಇಲ್ಲಿಗೆ ಕರೆತಂದಿತು. ನಾನು ಮಾಡಿದ ಸಿನಿಮಾಗಳು ನಿರೀಕ್ಷಿತ ಮಟ್ಟಕ್ಕೆ ಜನರನ್ನು ಮುಟ್ಟಲಿಲ್ಲ. ‘ಆ್ಯಕ್ಟರ್’ ಸಿನಿಮಾದ ನಂತರ ಕ್ಯಾಮೆರಾ ಮುಂದೆ ಬರಬಾರದು ಎಂದು ನಿರ್ಧರಿಸಿದೆ. ಹಾಗಾಗಿ ಎಂಟು ವರ್ಷಗಳ ಕಾಲ ಕ್ಯಾಮೆರಾ ಹಿಂದೆ ಇದ್ದೆ. ನಿರ್ದೇಶನ ಮಾಡುತ್ತಿದ್ದವನಿಗೆ ಈ ಧಾರಾವಾಹಿಗೆ ಅವಕಾಶ ಬಂತು. ಆಗಲೂ ನಟಿಸುವ ನಿರ್ಧಾರ ಮಾಡಿರಲಿಲ್ಲ. ಒಮ್ಮೆ ಪಾತ್ರವನ್ನು ನೋಡಿ, ಸವಾಲಿನಿಂದ ಕೂಡಿದೆ ಎಂದು ಹುರಿದುಂಬಿಸಿದ್ದರಿಂದ ಮತ್ತೆ ಬಣ್ಣ ಹಚ್ಚಿದೆ.

◆ **ಮುಂದೆ ನಿಮ್ಮ ಪ್ರಾತಿನಿಧ್ಯ ಯಾವುದಾಗುತ್ತದೆ?**

ಬರಹ ಮತ್ತು ನಿರ್ದೇಶನದಲ್ಲಿ ಆಸಕ್ತಿ ಇದೆ. ಮೊದಲು ಬರೆಯಬಲ್ಲೆ ಎನ್ನುವ ವಿಶ್ವಾಸ ಇರಲಿಲ್ಲ. ದಯಾಳ್ ಅವರ ಜೊತೆ ಒಂದು ಸಿನಿಮಾಕ್ಕೆ ಚಿತ್ರಕಥೆ ರೂಪಿಸುವ ಸಂದರ್ಭದಲ್ಲಿ ಅವರು ಡೈಲಾಗ್ ಬರೆಯಲು ಹೇಳಿದರು. ನನಗೆ ಬರೆಯಲು ಬರುವುದಿಲ್ಲ ಎಂದೇ ಹೇಳಿದೆ. ಒಮ್ಮೆ ಪ್ರಯತ್ನ ಮಾಡು ಅಂದರು. ಅವತ್ತು ಸಂಜೆ ಮನೆಗೆ ಬರುವ ಸಂದರ್ಭದಲ್ಲಿ ಎರಡು ದೃಶ್ಯಗಳನ್ನು ನಮ್ಮ ಸಹನಿರ್ದೇಶಕರಿಗೆ ನಿರೂಪಿಸಿದೆ. ಕಾಮಿಡಿ ಲೇಖಕ ನನ್ನಲ್ಲಿ ಇದ್ದಾನೆ ಎನ್ನುವುದು ಆಗ ಗೊತ್ತಾಯಿತು. ಅದಾದ ಮೇಲೆ ಸುಮಾರು ಹತ್ತು ಸಿನಿಮಾಗಳಿಗೆ ಅವರ ಜೊತೆ ಕೆಲಸ ಮಾಡಿದೆ. ಒಮ್ಮೆ ‘ಡೈಲಾಗ್ ಈಸ್ ದಿ ಹೀರೊ ಆಫ್ ದಿ ಫಿಲ್ಮ್’ ಎನ್ನುವ ಪ್ರತಿಕ್ರಿಯೆ ಸಿಕ್ಕಿತು. ಬರಿತಾ ಬರಿತಾ ಬರವಣಿಗೆ ಇಷ್ಟ ಆಯಿತು. ಅದನ್ನು ರೂಢಿಸಿಕೊಳ್ಳುತ್ತಾ ಹೋದೆ. ನನಗೆ ಬರಹದ ಮೇಲೆ ವಿಶ್ವಾಸ ಬಂತು. ನಿರ್ದೇಶನವನ್ನು ಕಲಿಯಲು ನಾನು ಶ್ರಮಿಸಲಿಲ್ಲ. ರವಿಚಂದ್ರನ್ ಅವರ ಕ್ರೇಜಿಸ್ಟಾರ್ ಸಿನಿಮಾಕ್ಕೆ ಸಹನಿರ್ದೇಶಕನಾಗಿ ಕೆಲಸ ಮಾಡಿದೆ. ಹಾಗಾಗಿ ಧಾರಾವಾಹಿಗಳನ್ನು ನಿರ್ದೇಶನ ಮಾಡಲು ಸಾಧ್ಯ ಆಯಿತು. ವೈಯಕ್ತಿಕವಾಗಿ ಲೇಖಕ ಮತ್ತು ನಿರ್ದೇಶಕನಾಗಿ ಹೆಸರು ಮಾಡಬೇಕು.

◆ **ಗ್ರಾಫಿಕ್ ಅಥವಾ ತಾಂತ್ರಿಕ ವೈಭವದಿಂದ ಕಲೆಗೆ ಹಿನ್ನಡೆ ಆಗುತ್ತಾ?**

ಒಂದೇ ತಕ್ಕಡಿಯಲ್ಲಿ ಹಾಕಿ ವಿಮರ್ಶೆ ಮಾಡಲು ಆಗುವುದಿಲ್ಲ. ದೊಡ್ಡಮಟ್ಟದಲ್ಲಿ ತಾಂತ್ರಿಕತೆ ಇದೆ ಅಂದ ಮಾತ್ರಕ್ಕೆ ಕಥೆಗೆ ಧಕ್ಕೆ ಆಗುತ್ತದೆ ಎನ್ನಲು ಆಗುವುದಿಲ್ಲ. ಕೆಲವು ಸಿನಿಮಾಗಳು ತಾಂತ್ರಿಕವಾಗಿ ಶ್ರೀಮಂತವಾಗಿದ್ದು, ಕಥೆಯಲ್ಲಿ ಸೋತಿರುತ್ತವೆ. ಇನ್ನೂ ಕೆಲವು ಸಿನಿಮಾಗಳಲ್ಲಿ ಕಥೆ ಜೋರಾಗಿದ್ದು ಅದನ್ನು ನಿರೂಪಿಸುವ ತಾಂತ್ರಿಕ ಕೌಶಲ್ಯದಲ್ಲಿ ಎಡವಿರುತ್ತಾರೆ. ಈ ರೀತಿಯ ಸಂಗತಿ ಅನೇಕ ಸಿನಿಮಾಗಳಲ್ಲಿ ಇರುತ್ತದೆ. ಅವೆರಡರ ಸಮನ್ವಯವನ್ನು ಕಾಪಾಡಬೇಕು. ಆಗ ಸೂಪರ ಡೂಪರ್ ಆಗುತ್ತದೆ. ಅವೆರಡರ ವಿಲೀನ ಆದಾಗಲೆ ಉತ್ತಮ ಸಿನಿಮಾ ಬರಲು ಸಾಧ್ಯ.

ಸೂಪರ್‌ಸ್ಟಾರ್ ಪರಿಕಲ್ಪನೆಗೂ ಇದನ್ನು ಅನ್ವಯಿಸಬಹುದು. ಇಲ್ಲಿ ಸ್ಟಾರ್ ಜೊತೆ ಒಂದು ಕಥೆ ನಿರೂಪಣೆ ಆಗುತ್ತದೆ. ಅವರ ಸುತ್ತ ಏನೇ ಬರೆದರೂ ನಾಯಕನ ಸುತ್ತ ಕಥೆ ಇದೆ ಎಂದು ಒಂದು ವರ್ಗದ ವೀಕ್ಷಕ ನೋಡಬಹುದು. ಆತ ಮತ್ತೊಬ್ಬ ಪ್ರೇಕ್ಷಕನನ್ನು ಕಳಿಸಬೇಕು ಎಂದರೆ ಅಲ್ಲಿ ಕಥೆ ಸ್ಟಾರ್ ಆಗುತ್ತದೆ. ನಟ ಯಾರೇ ಆಗಿದ್ದರೂ ಸ್ಟಾರ್ ಕಥೆಯೇ.

■ **ರಾಘವೇಂದ್ರ ಕೆ.**